<u>ಪ್ರದಾನ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳವರ ನ್ಯಾಯಾಲಯ, ಆಳಂದ.</u>

ಸಿ.ಸಿ.ನಂಃ 396/2015 ಸಿ.ಡಬ್ಲ್ಯೂ –4 ಪಿ.ಡಬ್ಲ್ಯೂ -02

| | | |
|---|---|---|
| ಹೆಸರು | ಃ | ಮಲ್ಲಪ್ಪ |
| ತಂದೆಃ ಗಂಡ | ಃ | ಹೊನ್ನಪ್ಪ |
| ವಯಸ್ಸು | ಃ | ೬೩ ವರ್ಷ |
| ಉದ್ಯೋಗ | : | ನಿವೃತ್ತ ಹಿರಿಯ ಲೆಕ್ಕ ಪರಿಶೋಧಕರು |
| ವಾಸಸ್ಥಳ | ಃ | ಕಲಬುರಗಿ |

ದಿನಾಂಕಃ೨೯.೧೧.೨೦೨೩

ಸತ್ಯ ಪ್ರತಿಜ್ಞೆಯ ಮೇರೆಗೆ

---

**<u>ಮುಖ್ಯ ವಿಚಾರಣೆ ಮಾನ್ಯ ಸ.ಸ.ಅ ಅವರಿಂದ ಃ</u>**

ಆರೋಪಿತರ ಪರಿಚಯ ಇರುತ್ತದೆ. ಚಾಸಾ-೧ ರಿಂದ ೩ ರವರ ಪರಿಚಯ ಇರುವುದಿಲ್ಲ. ಚಾಸಾ-೫-೬ ರವರ ಪರಿಚಯ ಇದೆ. ಚಾಸಾ-೭ ರಿಂದ ೯ ರವರ ಪರಿಚಯ ಇರುವುದಿಲ್ಲ.

ನಾನು ಲೆಕ್ಕ ಪರಿಶೋಧನ ಅಧಿಕಾರಿ ಎಂದು ಕರ್ತವ್ಯ ನಿರ್ವಹಿಸುತ್ತಿರುವಾಗ ನನ್ನ ಮೇಲಾಧಿಕಾರಿಗಳು ನನಗೆ ಅಮರ್ಜಾ ಅಣ್ಣೆಕಟ್ಟಿನ ಕೊರಳ್ಳಿ ಉಪವಿಭಾಗದ ಎಲ್ಲ ಕಡತಗಳನ್ನು ಲೆಕ್ಕ ಪರಿಶೋಧನೆ ಮಾಡಲು ಆದೇಶ ನೀಡಿದರು. ಅವರ ಆದೇಶದಂತೆ ಲೆಕ್ಕ ಪರಿಶೋಧನೆ ಮಾಡಲು ಆರಂಭಿಸಿದೆನು 1996 ರಿಂದ 2006 ರವರಗೆ ಸದರಿ ಅಮರ್ಜಾ ಅಣ್ಣೆಕಟ್ಟು ಪಿ.ಡಬ್ಲ್ಯೂ.ಡಿರವರ ನೇತೃತ್ವದಲ್ಲಿ ಇತ್ತು. ತದನಂತರ ಕರ್ನಾಟಕ ನೀರಾವರಿ ನಿಗಮಕ್ಕೆ ಅಸ್ತಾಂತರವಾಯಿತು. ನಾನು ಲೆಕ್ಕ ಪರಿಶೋಧನೆಯನ್ನು 1996 ರಿಂದ 2000 ರವರಿಗೆ ಲೆಕ್ಕ ಪರಿಶೋಧನೆ ಮಾಡಿರುತ್ತೆನೆ. ಸದರಿ ಲೆಕ್ಕ ಪರಿಶೋಧನೆ ಮಾಡುವ ಸಂದರ್ಬದಲ್ಲಿ ಸದರಿ ಅಣ್ಣೆಕಟ್ಟು ಪಿ.ಡಬ್ಲ್ಯೂ.ಡಿರವರ ನೇತೃತ್ವದಲ್ಲಿ ಇತ್ತು. ಆ ಇಲಾಖೆಯಲ್ಲಿ ಸದರಿ 1995 ರಿಂದ 2000 ಇಸವಿವರೆಗೆ ಎ.ಕೆ.ಚೌಡೆಕರ ಅನ್ನುವರು ಎ.ಇ.ಇಎಂದು ಕರ್ತವ್ಯ ನಿರ್ವಹಿಸುತ್ತಿದ್ದರು. ಅದರಂತೆ ಆರೋಪಿ ನಂ.೨ರವರು 17.07.2000 ರಿಂದ 2010 ರವರಗೆ ಎ.ಇ.ಇ ಎಂದು ಕರ್ತವ್ಯ ನಿರ್ವಹಿಸುತ್ತೀದ್ದಾರೆ. ಅದರಂತೆ ಆರೋಪಿ.ನಂ.೩ ರವರು ಏಪ್ರಿಲ್ 2000 ದಿಂದ 2001 ರವರಗೆ ಇನ್ ಚಾರ್ಜ ಎ.ಇ.ಇ ಎಂದು ಕರ್ತವ್ಯ ನಿರ್ವಹಿಸುತ್ತೀದ್ದರು. ಅದರಂತೆ ಆರೋಪಿ ನಂ.೪ ರವರು 1991 ರಿಂದ 2008 ರವರಗೆ ಎಸ್.ಡಿ.ಎ ಎಂದು ಸದರಿ ಇಲಾಖೆಯಲ್ಲಿ ಕರ್ತವ್ಯದಲ್ಲಿ ಕಾರ್ಯನಿರ್ವಹಿಸುತ್ತೀದ್ದರು.

ಸದರಿ ಇಲಾಖೆಯ ಎಲ್ಲ ಜವಾಬ್ದಾರಿಯು ಆರಿಟಿಕಲ್ ೧೫ ರ ಪ್ರಕಾರ ಎ.ಇ.ಇ ರವರಿಗೆ ಇರುತ್ತದೆ. ಸದರಿ ಎ.ಇ.ಇ ರವರು ಆರಿಟಿಕಲ್ 343 ರ ಪ್ರಕಾರ ೩ ಬಿಲ್ ಗಳನ್ನು ಟೆಜುರಿಗೆ ಕಳಿಸಿರುತ್ತಾರೆ. ಪ್ರೋಸಿಜರ ಪ್ರಕಾರ ಟೆಜುರಿರವರು ಒಂದು ಟೋಕನ್ನು ಕೊಡುತ್ತಾರೆ ಆ ಟೋಕನ್ನು ಪಡೆದುಕೊಂಡು ಎಸ.ಬಿ.ಆಯ್ ಬ್ಯಾಂಕನಲ್ಲಿ ನೀಡಿದರೆ ಹಣವನ್ನು ಬ್ಯಾಂಕನವರು ಸಂದಾಯ ಮಾಡುತ್ತಾರೆ. ಸದರು ಹಣವನ್ನು ಪಡೆದನಂತರ ಎ.ಇ.ಇ ರವರು ಅದನ್ನು ದಿಸ್ ಪ್ರೇಸ್ ಮಾಡಬೇಕಾಗುತ್ತದೆ. ಆದರೆ ಆರೋಪಿ ನಂ.೧ ರಿಂದ ೩ ರವರು ಅವರವರ ಕೆಲಸದ ಸಮಯದಲ್ಲಿ ಆರೋಪಿ ನಂ೪ ರವರಿಗೆ ಸದರಿ ಕೆಲಸವನ್ನು ಮಾಡಲು ಹೇಳುತ್ತಾರೆ. ಸದರಿ ಎ.ಇ.ಇರವರು ಆಫೀಸ್ ಆಡರ್ ರೆಜಿಸ್ಟ್ರರ, ಪೇ ಬಿಲ್ಲ ರೆಜಿಸ್ಟರ, ಸಂಬಳ ರೆಜಿಸ್ಟರ, ಅರಿಯರಸ್ ಟಿ.ಎ ಅಡವಾನ್ಸ

ಕ್ವಾಟಿಜನಸ್ ಬಿಲ್ಲ ಇವುಗಳನ್ನು ತಯಾರಿಸಿ ಟೆಜುರಿಗೆ ಕಳುಹಿಸಿ ಚಕ್ ಪಡೆದು ಬ್ಯಾಂಕನಿಂದ ಹಣವನ್ನು ಪಡದು ತಂದು ವಿತರಣೆ ಮಾಡುವ ಬಗ್ಗೆ ಎಸ್,ಡಿ,ಎ ಆದ ಆರೋಪಿ ನಂ. ೪ ರವರಿಗೆ ಕರ್ತವ್ಯ ನಿರ್ವಹಣೆ ಒಪ್ಪಿಸಿದ್ದು ಇರುತ್ತದೆ. ಅದರ ಪ್ರಕಾರ ಸದರು ಆರೋಪಿ ನಂ.೪ 1994 ರಿಂದ 2000 ರವಗೆ ನೌಕರರ ಸಂಬಳ ಹಬ್ಬದ ಮುಂಗಡ ಹಣ ರವಾಸ ಭತ್ಯೆ ಇತರೆ ತುಟ್ಟಿ ಭತ್ಯಗೆ ಸಂಬಂದಿಸಿದಂತೆ ನಕಲಿ ಬಿಲ್ ಗಳನ್ನು ಮಾಡಿಕೊಂಡರು ಅಳಂದ ಉಪಠಾಣೆಗೆ ಸಲ್ಲಿಸಿ ಅಲ್ಲಿಂದ ಚಕ್ ಪಡದು ಎಸ್.ಪಿ.ಆಯ್ ಆಳಂದದಲ್ಲಿ ಸಲ್ಲಿಸಿ ಹಣವನ್ನು ಹಂತ ಹಂತವಾಗಿ ಪಡೆದುಕೊಂಡಿರುತ್ತಾರೆ. ನಾವು ಲೆಕ್ಕ ಪರಿಶೋಧನೆ ಮಾಡಿದಾಗ ಸುಮಾರು ರೂ.32,78,000/- ಗಳಷ್ಟು ವ್ಯತ್ಯಾಸವಾಗಿರುತ್ತದೆ. ಸುಮಾರು 169 ಟೋಕಗಳನ್ನು ಬಳಸಿದ್ದು ಇರುತ್ತದೆ. ನಾವು ಲೆಕ್ಕ ಪರಿಶೋಧನೆ ಮಾಡುವಾಗ ತಕರಾರು ಹಾಕಿರುತ್ತೇವೆ.

**(ಈ ಹಂತದಲ್ಲ ಸ.ಸ.ಅ ರವರು ಮುಂದುವರೆದ ಮುಖ್ಯ ವಿಚಾರಣೆಗೆ ಸಮಯಾವಕಾಶ ಕೋರಿದರಿಂದ ಪರೀಶಿಲಿಸಿ ನೀಡಲಾಯಿತು. )**

ಓ.ಹೇ.ಕೇ.ಸರಿ ಇದೆ.

ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು
ಜೆ.ಎಂ.ಎಫ್.ಸಿ. ಆಳಂ ದ